# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IVA | ಬೆಂಗಳೂರು, ಮಂಗಳವಾರ, ೦೨, ಸೆಪ್ಟೆಂಬರ್, ೨೦೨೫ (ಭಾದ್ರಪದ ,೧೧, ಶಕವರ್ಷ, ೧೯೪೭)<br>BENGALURU, TUESDAY, 02, SEPTEMBER, 2025 (BHADRAPADA ,11, SHAKAVARSHA, 1947) | ನಂ. ೫೨೭<br>No. 527 |
|---|---|---|


## <u>ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ</u>

## <u>ಅಧಿಸೂಚನೆ</u>

**<u>ಸಂಖ್ಯೆ: ಸಂವ್ಯಶಾಇ 50 ಶಾಸನ 2025, ಬೆಂಗಳೂರು, ದಿನಾಂಕ: 02.09.2025</u>**

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕ, 2025 ಇದಕ್ಕೆ 2025 ರ ಸೆಪ್ಟೆಂಬರ್ ತಿಂಗಳ 2ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2025ರ ಕರ್ನಾಟಕ ಅಧಿನಿಯಮ ಸಂಖ್ಯೆ: 43 ಎಂಬುದಾಗಿ ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ (ಭಾಗ IV) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

### 2025 ರ ಕರ್ನಾಟಕ ಅಧಿನಿಯಮ ಸಂಖ್ಯೆ:43

(2025ರ ಸೆಪ್ಟೆಂಬರ್ ತಿಂಗಳ 2ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

### ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ಅಧಿನಿಯಮ, 2025

(2025ರ ಸೆಪ್ಟೆಂಬರ್ ತಿಂಗಳ 2ನೇ ದಿನಾಂಕದಂದು ರಾಜ್ಯಪಾಲರಿಂದ ಒಪ್ಪಿಗೆಯನ್ನು ಪಡೆಯಲಾಗಿದೆ)

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 (2017ರ ಕರ್ನಾಟಕ ಅಧಿನಿಯಮ 27)ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 (2017ರ ಕರ್ನಾಟಕ ಅಧಿನಿಯಮ 27)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಅನ್ಯಥಾ ಉಪಬಂಧಿಸಿದುದನ್ನುಳಿದು, ಈ ಅಧಿನಿಯಮದ ಉಪಬಂಧಗಳು ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ಅಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪ್ರಕರಣ 2ರ ತಿದ್ದುಪಡಿ.-** ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 (2017ರ ಕರ್ನಾಟಕ ಅಧಿನಿಯಮ 27)ರ (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 2ನೇ ಪ್ರಕರಣದಲ್ಲಿ,-

(i) ಖಂಡ (61)ರಲ್ಲಿ "ಪ್ರಕರಣ 9ರ ಉಪಪ್ರಕರಣ (3) ಅಥವಾ ಉಪಪ್ರಕರಣ (4)ರ" ಎಂಬ ಪದಗಳು, ಅಂಕಿಗಳು ಮತ್ತು ಆವರಣ ಚಿಹ್ನೆಗಳ ಬದಲಿಗೆ "ಈ ಅಧಿನಿಯಮ ಅಥವಾ ಸಂಯೋಜಿತ ಸರಕು ಮತ್ತು ಸೇವೆಗಳ ಅಧಿನಿಯಮ, 2017(2017ರ ಕೇಂದ್ರ ಅಧಿನಿಯಮ ಸಂ.13)ರ ಪ್ರಕರಣ 5ರ ಉಪಪ್ರಕರಣ (3) ಅಥವಾ ಉಪಪ್ರಕರಣ (4)ರ" ಎಂಬ ಪದಗಳು, ಅಂಕಿಗಳು ಮತ್ತು ಆವರಣ ಚಿಹ್ನೆಗಳನ್ನು 2025ರ ಏಪ್ರಿಲ್ 1ನೇ ದಿನಾಂಕದಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಿರುವುದಾಗಿ ಭಾವಿಸತಕ್ಕದ್ದು;

(ii) ಖಂಡ 69ರಲ್ಲಿ,-

(ಎ) ಖಂಡ (ಸಿ) ಯಲ್ಲಿ "ಪೌರಾಡಳಿತ" ಎಂಬ ಪದದ ತರುವಾಯ "ನಿಧಿಯ" ಎಂಬ ಪದವನ್ನು ಸೇರಿಸತಕ್ಕದ್ದು;

(ಬಿ) ಖಂಡ (ಸಿ) ಯ ತರುವಾಯ ಈ ಮುಂದಿನ ವಿವರಣೆಯನ್ನು ಸೇರಿಸತಕ್ಕದ್ದು, ಎಂದರೆ:-

"**ವಿವರಣೆ:-** ಈ ಉಪ-ಖಂಡದ ಉದ್ದೇಶಗಳಿಗಾಗಿ,-

(i) "ಸ್ಥಳೀಯ ನಿಧಿ" ಎಂದರೆ ಪಂಚಾಯತಿ ಪ್ರದೇಶಕ್ಕೆ ಸಂಬಂಧಿಸಿದಂತೆ ನಾಗರಿಕ ಪ್ರಕಾರ್ಯಗಳನ್ನು ನೆರವೇರಿಸುವುದಕ್ಕಾಗಿ ಮತ್ತು ಯಾವುದೇ ಹೆಸರಿನಿಂದ ಕರೆಯಲಾಗುವ ಯಾವುದೇ ಯುಕ್ತ ತೆರಿ , ಕರ, ಸುಂಕ, ಉಪಕರ ಅಥವಾ ಶುಲ್ಕವನ್ನು ವಿಧಿಸಲು, ಸಂಗ್ರಹಿಸಲು ಸ್ಥಾಪಿಸಲಾದ ಸ್ಥಳೀಯ ಸ್ವಯಮಾಡಳಿತ ಪ್ರಾಧಿಕಾರದ ನಿಯಂತ್ರಣ ಅಥವಾ ವ್ಯವಸ್ಥಾಪನೆಯಡಿಯಲ್ಲಿನ ಯಾವುದೇ ನಿಧಿ;

(ii) "ಪೌರಾಡಳಿತ ನಿಧಿ" ಎಂದರೆ ಮಹಾನಗರ ಪ್ರದೇಶ ಅಥವಾ ಪೌರ ಪ್ರದೇಶಕ್ಕೆ ಸಂಬಂಧಿಸಿದಂತೆ ನಾಗರಿಕ ಪ್ರಕಾರ್ಯಗಳನ್ನು ನೆರವೇರಿಸುವುದಕ್ಕಾಗಿ ಮತ್ತು ಯಾವುದೇ ಹೆಸರಿನಿಂದ ಕರೆಯಲಾಗುವ ಯಾವುದೇ ಯುಕ್ತ ತೆರಿಗೆ, ಕರ, ಸುಂಕ, ಉಪಕರ ಅಥವಾ ಶುಲ್ಕವನ್ನು ವಿಧಿಸಲು, ಸಂಗ್ರಹಿಸಲು ಸ್ಥಾಪಿಸಲಾದ ಸ್ಥಳೀಯ ಸ್ವಯಮಾಡಳಿತ ಪ್ರಾಧಿಕಾರದ ನಿಯಂತ್ರಣ ಅಥವಾ ವ್ಯವಸ್ಥಾಪನೆಯಡಿಯಲ್ಲಿನ ಯಾವುದೇ ನಿಧಿ."

(iii) ಖಂಡ (116)ರ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(116ಎ) "ವಿಶಿಷ್ಟ ಗುರುತು ಛಾಪನೆ" ಎಂದರೆ 148ಎ ಪ್ರಕರಣದ ಉಪ-ಪ್ರಕರಣ (2)ರ (ಬಿ) ಖಂಡದಲ್ಲಿ ಉಲ್ಲೇಖಿಸಿದ ವಿಶಿಷ್ಟ ಗುರುತು ಛಾಪನೆ ಹಾಗೂ ನಿರ್ದಿಷ್ಟವಾದ, ಭದ್ರತಾ ಮತ್ತು ಅಳಿಸಲಾಗದ ಡಿಜಿಟಲ್ ಸ್ಟಾಂಪು, ಡಿಜಿಟಲ್ ಗುರುತು ಅಥವಾ ಯಾವುದೇ ಇತರ ಗುರುತನ್ನು ಒಳಗೊಳ್ಳುವುದು;"

**3. ಪ್ರಕರಣ 12ರ ತಿದ್ದುಪಡಿ.-** ಮೂಲ ಅಧಿನಿಯಮದ ಪ್ರಕರಣ 12ರಲ್ಲಿನ ಉಪ-ಪ್ರಕರಣ (4)ನ್ನು ಬಿಟ್ಟುಬಿಡತಕ್ಕದ್ದು.

**4. ಪ್ರಕರಣ 13ರ ತಿದ್ದುಪಡಿ.-** ಮೂಲ ಅಧಿನಿಯಮದ ಪ್ರಕರಣ 13ರಲ್ಲಿನ ಉಪ-ಪ್ರಕರಣ (4)ನ್ನು ಬಿಟ್ಟುಬಿಡತಕ್ಕದ್ದು.

**5. ಪ್ರಕರಣ 17ರ ತಿದ್ದುಪಡಿ.-** ಮೂಲ ಅಧಿನಿಯಮದ ಪ್ರಕರಣ 17ರ ಉಪ-ಪ್ರಕರಣ (5)ರಲ್ಲಿನ (ಡಿ) ಖಂಡದಲ್ಲಿ,-

(i) "ಸ್ಥಾವರ ಅಥವಾ ಯಂತ್ರೋಪಕರಣಗಳನ್ನು" ಎಂಬ ಪದಗಳ ಬದಲಾಗಿ "ಸ್ಥಾವರ ಮತ್ತು ಯಂತ್ರೋಪಕರಣಗಳನ್ನು" ಎಂಬ ಪದಗಳನ್ನು 2017ರ ಜುಲೈ 1ನೇ ದಿನಾಂಕದಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಿರುವುದಾಗಿ ಭಾವಿಸತಕ್ಕದ್ದು;

(ii) ಈಗಾಗಲೇ ಇರುವ ವಿವರಣೆಯನ್ನು ವಿವರಣೆ 1 ಎಂಬ ಸಂಖ್ಯೆಯನ್ನು ನೀಡತಕ್ಕದ್ದು ಮತ್ತು ಹಾಗೆ ಸಂಖ್ಯೆ ನೀಡಲಾದ ವಿವರಣೆ 1ರ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"**ವಿವರಣೆ 2.-** (ಡಿ) ಖಂಡದ ಉದ್ದೇಶಕ್ಕಾಗಿ, ಯಾವುದೇ ತೀರ್ಪು, ಡಿಕ್ರಿ ಅಥವಾ ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಇತರ ಪ್ರಾಧಿಕಾರದ ಆದೇಶಕ್ಕೆ ವಿರುದ್ಧವಾದುದು ಏನೇ ಒಳಗೊಂಡಿದ್ದರೂ, "ಸ್ಥಾವರ ಅಥವಾ ಯಂತ್ರೋಪಕರಣಗಳು" ಎಂಬ ಯಾವುದೇ ಉಲ್ಲೇಖವು "ಸ್ಥಾವರ ಅಥವಾ ಯಂತ್ರೋಪಕರಣಗಳು" ಎಂಬುದರ ಉಲ್ಲೇಖವೆಂದು ಅರ್ಥೈಸತಕ್ಕದ್ದು ಹಾಗೂ ಯಾವಾಗಲೂ ಹಾಗೆ ಉಲ್ಲೇಖಿಸಲಾಗಿದೆ ಎಂಬುದನ್ನು ಅರ್ಥೈಸತಕ್ಕದ್ದೆಂದು ಈ ಮೂಲಕ ಸ್ಪಷ್ಟೀಕರಿಸಲಾಗಿದೆ."

**6. ಪ್ರಕರಣ 20ರ ತಿದ್ದುಪಡಿ.-** ಮೂಲ ಅಧಿನಿಯಮದ ಪ್ರಕರಣ 20ರ ಉಪ-ಪ್ರಕರಣರಲ್ಲಿ,-

(i) ಉಪ-ಪ್ರಕರಣ (1)ರಲ್ಲಿ, "ಪ್ರಕರಣ 9ರ ಉಪಪ್ರಕರಣ (3) ಅಥವಾ ಉಪಪ್ರಕರಣ (4)ರ" ಎಂಬ ಪದಗಳು, ಅಂಕಿಗಳ ಮತ್ತು ಆವರಣ ಚಿಹ್ನೆಗಳ ಬದಲಿಗೆ "ಈ ಅಧಿನಿಯಮ ಅಥವಾ ಸಂಯೋಜಿತ ಸರಕು ಮತ್ತು ಸೇವೆಗಳ ಅಧಿನಿಯಮ, 2017(2017ರ ಕೇಂದ್ರ ಅಧಿನಿಯಮ 13)ರ ಪ್ರಕರಣ 5ರ ಉಪಪ್ರಕರಣ (3) ಅಥವಾ ಉಪಪ್ರಕರಣ (4)ರ" ಎಂಬ ಪದಗಳು, ಅಂಕಿಗಳು ಮತ್ತು ಆವರಣ ಚಿಹ್ನೆಗಳನ್ನು 2025ರ ಏಪ್ರಿಲ್ 1ನೇ ದಿನಾಂಕದಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಿರುವುದಾಗಿ ಭಾವಿಸತಕ್ಕದ್ದು;

(ii) ಉಪ-ಪ್ರಕರಣ (2)ರಲ್ಲಿ, "ಪ್ರಕರಣ 9ರ ಉಪಪ್ರಕರಣ (3) ಅಥವಾ ಉಪಪ್ರಕರಣ (4)ರ" ಎಂಬ ಪದಗಳು, ಅಂಕಿಗಳ ಮತ್ತು ಆವರಣ ಚಿಹ್ನೆಗಳ ಬದಲಿಗೆ "ಈ ಅಧಿನಿಯಮ ಅಥವಾ ಸಂಯೋಜಿತ ಸರಕು ಮತ್ತು ಸೇವೆಗಳ ಅಧಿನಿಯಮ, 2017(2017ರ ಕೇಂದ್ರ ಅಧಿನಿಯಮ 13)ರ ಪ್ರಕರಣ 5ರ ಉಪಪ್ರಕರಣ (3) ಅಥವಾ ಉಪಪ್ರಕರಣ (4)ರ" ಎಂಬ ಪದಗಳು, ಅಂಕಿಗಳು ಮತ್ತು ಆವರಣ ಚಿಹ್ನೆಗಳನ್ನು 2025ರ ಏಪ್ರಿಲ್ 1ನೇ ದಿನಾಂಕದಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಿರುವುದಾಗಿ ಭಾವಿಸತಕ್ಕದ್ದು.

**7. ಪ್ರಕರಣ 34ರ ತಿದ್ದುಪಡಿ.-** ಮೂಲ ಅಧಿನಿಯಮದ ಪ್ರಕರಣ 34ರ (2)ನೇ ಉಪ-ಪ್ರಕರಣದ ಪರಂತುಕಕ್ಕೆ ಈ ಮುಂದಿನ ಪರಂತುಕವನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"ಪರಂತು ಈ ಮುಂದಿನವುಗಳಲ್ಲಿ ಪೂರೈಕೆದಾರನ ಹುಟ್ಟುವಳಿ ತೆರಿಗೆ ಬಾಧ್ಯತೆಯಲ್ಲಿನ ಇಳಿಕೆಯನ್ನು ಅನುಮತಿಸತಕ್ಕದ್ದಲ್ಲ,-

(i) ಅಂಥ ಜಮಾ ಚೀಟಿಗೆ ಸಂಬಂಧಿಸಿದಂತೆ ಹೂಡುವಳಿ ತೆರಿಗೆ ಜಮೆಯನ್ನು ಪಡೆದುಕೊಂಡಿದ್ದಲ್ಲಿ, ಅಂಥ ಸ್ವೀಕೃತಿದಾರನು ನೋಂದಾಯಿತ ವ್ಯಕ್ತಿಯಾಗಿದ್ದು, ಅದನ್ನು ಸ್ವೀಕೃತಿದಾರನು ಹಿಮ್ಮುಖಗೊಳಿಸದಿದ್ದರೆ;

(ii) ಇತರ ಪ್ರಕರಣಗಳಲ್ಲಿ, ಅಂಥ ಪೂರೈಕೆಯ ತೆರಿಗೆ ಮೇಲಿನ ಹೊರೆಯನ್ನು ಯಾರೇ ಇತರ ವ್ಯಕ್ತಿಯ ಮೇಲೆ ಹೊರಿಸಿದ್ದರೆ.".

**8. ಪ್ರಕರಣ 38ರ ತಿದ್ದುಪಡಿ.-** ಮೂಲ ಅಧಿನಿಯಮದ ಪ್ರಕರಣ 34ರಲ್ಲಿ,-

(i) ಉಪ-ಪ್ರಕರಣ (1)ರಲ್ಲಿ "ಸ್ವಯಂ-ಜನ್ಯಗೊಂಡ ವಿವರ ಪತ್ರದ" ಎಂಬ ಪದಗಳ ಬದಲಿಗೆ "ವಿವರ ಪತ್ರದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) ಉಪ-ಪ್ರಕರಣ (2)ರಲ್ಲಿ,-

(ಎ) "ಅಡಿಯಲ್ಲಿ ಸ್ವಯಂ-ಜನ್ಯಗೊಂಡ" ಎಂಬ ಪದಗಳ ಬದಲಿಗೆ "ಉಲ್ಲೇಖದಲ್ಲಿನ" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು;

(ಬಿ) ಖಂಡ (ಎ)ರಲ್ಲಿ "ಮತ್ತು" ಎಂಬ ಪದವನ್ನು ಬಿಟ್ಟುಬಿಡತಕ್ಕದ್ದು;

(ಸಿ) ಖಂಡ (ಬಿ)ರಲ್ಲಿ "ಈ ಕೆಳಕಂಡವರಿಂದ" ಎಂಬ ಪದಗಳ ಬದಲಿಗೆ "ಈ ಕೆಳಕಂಡವರನ್ನು ಒಳಗೊಂಡಂತೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ಡಿ) ಖಂಡ (ಬಿ) ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಸಿ) ನಿಯಮಿಸಬಹುದಾದಂಥ ಇತರ ವಿವರಗಳು.".

**9. ಪ್ರಕರಣ 39ರ ತಿದ್ದುಪಡಿ.-** ಮೂಲ ಅಧಿನಿಯಮದ ಪ್ರಕರಣ 39ರಲ್ಲಿನ ಉಪ-ಪ್ರಕರಣ (1)ರಲ್ಲಿ "ಅಂಥ ಸಮಯದೊಳಗಾಗಿ" ಎಂಬ ಪದಗಳ ಬದಲಿಗೆ "ಅಂಥ ಸಮಯದೊಳಗಾಗಿ ಹಾಗೂ ಅಂಥ ಷರತ್ತುಗಳು ಮತ್ತು ನಿರ್ಬಂಧಗಳಿಗೊಳಪಟ್ಟು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**10. ಪ್ರಕರಣ 107ರ ತಿದ್ದುಪಡಿ.-** ಮೂಲ ಅಧಿನಿಯಮದ ಪ್ರಕರಣ 107ರ (6)ನೇ ಉಪ-ಪ್ರಕರಣದ ಪರಂತುಕಕ್ಕೆ ಈ ಮುಂದಿನ ಪರಂತುಕವನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"ಪರಂತು ಯಾವುದೇ ತೆರಿಗೆಯ ತಗಾದೆಯನ್ನು ಒಳಗೊಂಡಿಲ್ಲದ ದಂಡನೆಯನ್ನು ಬೇಡುವ ಯಾವುದೇ ಆದೇಶದ ಸಂಬಂಧದಲ್ಲಿ, ಅಂಥ ಆದೇಶದ ವಿರುದ್ಧ ಅಪೀಲುದಾರನು, ಸದರಿ ದಂಡದ ಶೇಕಡ ಹತ್ತರಷ್ಟಕ್ಕೆ ಸಮನಾದ ಮೊತ್ತವನ್ನು ಸಂದಾಯ ಮಾಡಿದ ಹೊರತು ಯಾವುದೇ ಅಪೀಲನ್ನು ಸಲ್ಲಿಸತಕ್ಕದ್ದಲ್ಲ."

**11. ಪ್ರಕರಣ 112ರ ತಿದ್ದುಪಡಿ.-** ಮೂಲ ಅಧಿನಿಯಮದ ಪ್ರಕರಣ 112ರ (8)ನೇ ಉಪ-ಪ್ರಕರಣಕ್ಕೆ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು ಯಾವುದೇ ತೆರಿಗೆಯ ತಗಾದೆಯನ್ನು ಒಳಗೊಂಡಿಲ್ಲದ ದಂಡನೆಯನ್ನು ಬೇಡುವ ಯಾವುದೇ ಆದೇಶದ ಸಂಬಂಧದಲ್ಲಿ, ಅಂಥ ಆದೇಶದ ವಿರುದ್ಧ ಅಪೀಲುದಾರನು, ಪ್ರಕರಣ 107ರ ಉಪ-ಪ್ರಕರಣ (6)ರ ಪರಂತುಕದ ಅಡಿಯಲ್ಲಿ ಪಾವತಿಸಬೇಕಾದ ಮೊತ್ತದ ಜೊತೆಗೆ ಸದರಿ ದಂಡದ ಶೇಕಡ ಹತ್ತರಷ್ಟಕ್ಕೆ ಸಮನಾದ ಮೊತ್ತವನ್ನು ಸಂದಾಯ ಮಾಡಿದ ಹೊರತು ಯಾವುದೇ ಅಪೀಲನ್ನು ಸಲ್ಲಿಸತಕ್ಕದ್ದಲ್ಲ."

**12. ಹೊಸ ಪ್ರಕರಣ 122ಬಿ ಸೇರ್ಪಡೆ.-** ಮೂಲ ಅಧಿನಿಯಮದ ಪ್ರಕರಣ 122ಎ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"**122ಬಿ. ಮಾರ್ಗಪತ್ತೆ ಮತ್ತು ಗುರುತುಹಚ್ಚುವ ಕಾರ್ಯವ್ಯವಸ್ಥೆಯನ್ನು ಪಾಲಿಸಲು ವಿಫಲವಾದುದಕ್ಕಾಗಿ ದಂಡನೆ.-** ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, 148ಎ ಪ್ರಕರಣದ ಉಪ-ಪ್ರಕರಣ (1)ರ ಖಂಡ (ಬಿ)ರಲ್ಲಿ ಉಲ್ಲೇಖಿಸಲಾದ ಯಾರೇ ವ್ಯಕ್ತಿಯು, ಸದರಿ ಪ್ರಕರಣದ ಉಪಬಂಧಗಳ ಉಲ್ಲಂಘನೆಯನ್ನು ಮಾಡಿದರೆ, ಆತನು ಅಧ್ಯಾಯ XVರ ಅಥವಾ ಈ ಅಧ್ಯಾಯದ ಉಪಬಂಧಗಳ ಅಡಿಯಲ್ಲಿನ ಯಾವುದೇ ದಂಡನೆಯ ಜೊತೆಗೆ ಒಂದು ಲಕ್ಷ ರೂಪಾಯಿಗಳ ಮೊತ್ತ ಅಥವಾ ಅಂಥ ಸರಕುಗಳ ಮೇಲೆ ಪಾವತಿಸಬೇಕಾದ ತೆರಿಗೆಯ ಶೇಕಡ

ಹತ್ತರಷ್ಟರಲ್ಲಿ ಯಾವುದು ಹೆಚ್ಚೋ ಅಷ್ಟಕ್ಕೆ ಸಮನಾದ ಮೊತ್ತದ ದಂಡವನ್ನು ಪಾವತಿಸಲು ಹೊಣೆಗಾರನಾಗಿರತಕ್ಕದ್ದು.".

**13. ಹೊಸ ಪ್ರಕರಣ 148ಎ ಸೇರ್ಪಡೆ.-** ಮೂಲ ಅಧಿನಿಯಮದ ಪ್ರಕರಣ 122ಎ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"**148ಎ. ಕೆಲವು ಸರಕುಗಳ ಮಾರ್ಗಪತ್ತೆ ಮತ್ತು ಗುರುತುಹಚ್ಚುವ ಕಾರ್ಯವ್ಯವಸ್ಥೆ.-** ಸರ್ಕಾರವು ಕೌನ್ಸಿಲ್‌ನ ಶಿಫಾರಸ್ಸುಗಳ ಮೇರೆಗೆ, ಅಧಿಸೂಚನೆಯ ಮೂಲಕ,-

(ಎ) ಸರಕುಗಳನ್ನು;

(ಬಿ) ಈ ಪ್ರಕರಣದ ಉಪಬಂಧಗಳು ಅನ್ವಯವಾಗತಕ್ಕ ಅಂಥ ಸರಕುಗಳ ಅನುಭೋಗ ಅಥವಾ ವ್ಯವಹಾರದಲ್ಲಿರುವ ವ್ಯಕ್ತಿಗಳು ಅಥವಾ ವ್ಯಕ್ತಿಗಳ ವರ್ಗವನ್ನು,

- ನಿರ್ದಿಷ್ಟಪಡಿಸಬಹುದು.

(2) ಉಪ-ಪ್ರಕರಣ (1)ರ (ಎ) ಖಂಡದಲ್ಲಿ ಉಲ್ಲೇಖವಾಗಿರುವ ಸರಕುಗಳ ಸಂಬಂಧದಲ್ಲಿ ಸರ್ಕಾರವು,-

(ಎ) ವಿಶಿಷ್ಟ ಗುರುತು ಛಾಪನೆಯನ್ನು ಅಂಟಿಸಲು ಅನುವಾಗುವ ಹಾಗೂ ವಿದ್ಯುನ್ಮಾನ ಸಂಗ್ರಹ ಮತ್ತು ನಿಯಮಿಸಬಹುದಾದಂಥ ವ್ಯಕ್ತಿಗಳ ಮೂಲಕ ಅದರಲ್ಲಿರುವ ಮಾಹಿತಿ ಪಡೆಯುವುದಕ್ಕಾಗಿ ವ್ಯವಸ್ಥೆಯೊಂದನ್ನು ಉಪಬಂಧಿಸಬಹುದು; ಮತ್ತು

(ಬಿ) ಅಂಥ ಸರಕುಗಳಿಗೆ ಅದರಲ್ಲಿ ದಾಖಲಿಸಬೇಕಾದ ಮಾಹಿತಿಯನ್ನು ಒಳಗೊಂಡಂತೆ ವಿಶಿಷ್ಟ ಗುರುತು ಛಾಪನೆಯನ್ನು ನಿಯಮಿಸಬಹುದು.

(3) ಉಪ-ಪ್ರಕರಣ (1)ರಲ್ಲಿ ಉಲ್ಲೇಖಿಸಲಾದ ವ್ಯಕ್ತಿಗಳು,-

(ಎ) ಸದರಿ ಸರಕುಗಳು ಅಥವಾ ಅದರೊಂದಿಗಿನ ಪ್ಯಾಕೇಜುಗಳ ಮೇಲೆ ಅಂಥ ಮಾಹಿತಿಯನ್ನೊಳಗೊಂಡ ಮತ್ತು ಅಂಥ ವಿಧಾನದಲ್ಲಿ ವಿಶಿಷ್ಟ ಗುರುತು ಛಾಪನೆಯನ್ನು ಅಂಟಿಸತಕ್ಕದ್ದು;

(ಬಿ) ಅಂಥ ಸಮಯದೊಳಗಾಗಿ ಅಂಥ ಮಾಹಿತಿ ಮತ್ತು ವಿವರಗಳನ್ನು ಒದಗಿಸತಕ್ಕದ್ದು ಹಾಗೂ ಅಂಥ ದಾಖಲೆಗಳು ಅಥವಾ ದಸ್ತಾವೇಜುಗಳನ್ನು ಅಂಥ ನಮೂನೆ ಮತ್ತು ವಿಧಾನದಲ್ಲಿ ನಿರ್ವಹಿಸತಕ್ಕದ್ದು;

(ಸಿ) ಗುರುತಿಸುವಿಕೆ, ಸಾಮರ್ಥ್ಯ, ಕಾರ್ಯಾಚರಣೆಯ ಅವಧಿ ಮತ್ತು ಅಂಥ ಇತರ ವಿವರಗಳು ಅಥವಾ ಮಾಹಿತಿಯನ್ನು ಒಳಗೊಂಡಂತೆ ಅಂಥ ಸರಕುಗಳ ಉತ್ಪಾದನೆಯ ವ್ಯವಹಾರದ ಸ್ಥಳದಲ್ಲಿ ಸ್ಥಾಪಿಸಲಾದ ಯಂತ್ರೋಪಕರಣದ ವಿವರಗಳನ್ನು ಅಂಥ ಸಮಯದೊಳಗೆ ಹಾಗೂ ಅಂಥ ನಮೂನೆ ಮತ್ತು ವಿಧಾನದಲ್ಲಿ ಒದಗಿಸತಕ್ಕದ್ದು; ಮತ್ತು

(ಡಿ) ಉಪ-ಪ್ರಕರಣ (2)ರಲ್ಲಿ ಉಲ್ಲೇಖಿಸಲಾದ ವ್ಯವಸ್ಥೆಗೆ ಸಂಬಂಧಿಸಿದ ಅಂಥ ಮೊತ್ತವನ್ನು ನಿಯಮಿಸಬಹುದಾದಂತೆ ಪಾವತಿಸತಕ್ಕದ್ದು.".

**14. ಅನುಸೂಚಿ IIIರ ತಿದ್ದುಪಡಿ.-** ಮೂಲ ಅಧಿನಿಯಮದ ಅನುಸೂಚಿ IIIರಲ್ಲಿ,-

(i) 8ನೇ ಖಂಡಿಕೆಯಲ್ಲಿನ (ಎ) ಖಂಡದ ತರುವಾಯ ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು ಮತ್ತು 2017ರ ಜುಲೈ 1ನೇ ದಿನಾಂಕದಿಂದ ಜಾರಿಗೆ ಬರುವಂತೆ ಸೇರಿಸಿರುವುದಾಗಿ ಭಾವಿಸತಕ್ಕದ್ದು, ಎಂದರೆ:-

"(ಎಎ) ವಿಶೇಷ ವಿತ್ತ ವಲಯದಲ್ಲಿ ಅಥವಾ ಮುಕ್ತ ಮಾರಾಟ ಶೇಖರಣಾ ವಲಯದಲ್ಲಿ ರಫ್ತಿಗಾಗಿ ಅಥವಾ ಸ್ಥಳೀಯ ಸುಂಕಸೂಚಿ ಪ್ರದೇಶಕ್ಕೆ ತೀರುವಳಿ ಮಾಡುವ ಮೊದಲು ಶೇಖರಿಸಿದ ಸರಕುಗಳ ಪೂರೈಕೆ;"

(ii) ವಿವರಣೆ 2ರಲ್ಲಿ "ಖಂಡಿಕೆ 8ರ" ಎಂಬ ಪದಗಳು ಮತ್ತು ಅಂಕಿಯ ತರುವಾಯ "(ಎ) ಖಂಡದ" ಪದ, ಆವರಣ ಚಿಹ್ನೆಗಳು ಮತ್ತು ಅಕ್ಷರವನ್ನು ಸೇರಿಸತಕ್ಕದ್ದು ಮತ್ತು 2017ರ ಜುಲೈ 1ನೇ ದಿನಾಂಕದಿಂದ ಜಾರಿಗೆ ಬರುವಂತೆ ಸೇರಿಸಿರುವುದಾಗಿ ಭಾವಿಸತಕ್ಕದ್ದು; ಮತ್ತು

(iii) ವಿವರಣೆ 2ರ ತರುವಾಯ ಈ ಮುಂದಿನ ವಿವರಣೆಯನ್ನು ಸೇರಿಸತಕ್ಕದ್ದು ಮತ್ತು 2017ರ ಜುಲೈ 1ನೇ ದಿನಾಂಕದಿಂದ ಜಾರಿಗೆ ಬರುವಂತೆ ಸೇರಿಸಿರುವುದಾಗಿ ಭಾವಿಸತಕ್ಕದ್ದು, ಎಂದರೆ:-

**"ವಿವರಣೆ 3.-** 8ನೇ ಖಂಡಿಕೆಯ (ಎಎ) ಖಂಡದ ಉದ್ದೇಶಗಳಿಗಾಗಿ, "ವಿಶೇಷ ವಿತ್ತ ವಲಯ", "ಮುಕ್ತ ಮಾರಾಟ ಶೇಖರಣಾ ವಲಯ" ಮತ್ತು "ಸ್ಥಳೀಯ ಸುಂಕಸೂಚಿ ಪ್ರದೇಶ" ಎಂಬ ಪದಾವಳಿಗಳು ವಿಶೇಷ ವಿತ್ತ ವಲಯಗಳ ಅಧಿನಿಯಮ, 2005(2005ರ ಕೇಂದ್ರ ಅಧಿನಿಯಮ 28)ರ 2ನೇ ಪ್ರಕರಣದಲ್ಲಿ ಅವುಗಳಿಗೆ ನೀಡಲಾದ ಅದೇ ಅರ್ಥವನ್ನು ಹೊಂದಿರತಕ್ಕದ್ದು."

**15. ಸಂಗ್ರಹಿಸಲಾದ ತೆರಿಗೆಗೆ ಮರುಸಂದಾಯ ಇರುವುದಿಲ್ಲ.-** ಸಂಗ್ರಹಿಸಲಾದ, ಆದರೆ ಈ ತಿದ್ದುಪಡಿ ಅಧಿನಿಯಮದ 14ನೇ ಪ್ರಕರಣವು ಜಾರಿಯಲ್ಲಿರುವ ಎಲ್ಲಾ ವಾಸ್ತವಿಕ ಸಮಯಗಳಲ್ಲೂ ಮಾಡಿರುವ ಎಲ್ಲಾ ತೆರಿಗೆಗಳನ್ನು ಮರುಸಂದಾಯ ಮಾಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಜಿ. ಶ್ರೀಧರ್)**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

**PARLIAMENTARY AFFAIRS AND LEGISLATION SECRETARIAT**

**NOTIFICATION**

**NO.DPAL 50 SHASHANA 2025, BENGALURU, DATED: 02.09.2025**

ಭಾರತ ಸಂವಿಧಾನದ ಅನುಚ್ಛೇಧ 348ರ ಖಂಡ (3)ರ ಅಡಿಯಲ್ಲಿ ರಾಜ್ಯಪಾಲರಿಂದ ಅಧಿಕೃತಗೊಳಿಸಿದ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ಅಧಿನಿಯಮ, 2025 (2025 ರ ಕರ್ನಾಟಕ ಅಧಿನಿಯಮ ಸಂಖ್ಯೆ: 43) ರ ಭಾಷಾಂತರವನ್ನು ಅಧಿಕೃತ ಆಂಗ್ಲ ಪಠ್ಯವೆಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ (ಭಾಗ IV) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

**KARNATAKA ACT NO. 43 OF 2025**

(First Published in the Karnataka Gazette Extra-ordinary on the 2nd day of September 2025)

**THE KARNATAKA GOODS AND SERVICES TAX (AMENDMENT) ACT, 2025**

(Received the assent of the Governor on the 2nd day of September 2025)

An Act further to amend the Karnataka Goods and Services Tax Act, 2017(Karnataka Act 27 of 2017).

Whereas, it is expedient further to amend the Karnataka Goods and Services Tax Act, 2017 (Karnataka Act 27 of 2017), for the purpose hereinafter appearing;

Be it enacted by the Karnataka State Legislature in the seventy sixth year of the Republic of India as follows:-

**1. Short title and commencement**.- (1) This Act may be called the Karnataka Goods and Services Tax (Amendment) Act, 2025.

(2) Save as otherwise provided, the provisions of this Act shall come into force on such date, as the Government may, by notification in the Official Gazette, appoint.

**2. Amendment of section 2.-** In the Karnataka Goods and Services Tax Act, 2017 (Karnataka Act 27 of 2017) (hereinafter referred to as the Principal Act), in section 2,-

(i) in clause (61), after the word and figure "section 9", the words, brackets and figures "of this Act or under sub-section (3) or sub-section (4) of section 5 of the Integrated Goods and Services Tax Act, 2017 (Central Act No 13 of 2017)" shall be deemed to have been inserted with effect from the 1st day of April, 2025;

(ii) in clause (69),-

(a) in sub-clause (c), after the words "management of a municipal", the word "fund" shall be inserted;

(b) after sub-clause (c), the following Explanation shall be inserted, namely:-

'**Explanation.-** For the purposes of this sub-clause-

(i) "local fund" means any fund under the control or management of an authority of a local self-government established for discharging civic functions in relation to a Panchayat area and vested by law with the powers to levy, collect and appropriate any tax, duty, toll, cess or fee, by whatever name called;

(ii) "municipal fund" means any fund under the control or management of an authority of a local self-government established for discharging civic functions in relation to a Metropolitan area or Municipal area and vested by law with the powers to levy, collect and appropriate any tax, duty, toll, cess or fee, by whatever name called;

(iii) after clause (116), the following clause shall be inserted, namely:-

(116A) "unique identification marking" means the unique identification marking referred to in clause (b) of sub-section (2) of section 148A and includes a digital stamp, digital mark or any other similar marking, which is unique, secure and non-removable;

**3. Amendment of section 12.-** In section 12 of the Principal Act, sub-section (4) shall be omitted.

**4. Amendment of section 13.-** In section 13 of the Principal Act, sub-section (4) shall be omitted.

**5. Amendment of section 17.-** In section 17 of the Principal Act, in sub-section (5), in clause (d),-

(i) for the words "plant or machinery", the words "plant and machinery" shall be deemed to have been substituted with effect from the 1st day of July, 2017;

(ii) the existing Explanation shall be numbered as Explanation-1 and after Explanation-1 as so numbered, the following Explanation shall be inserted, namely:-

**"Explanation-2**.- For the purposes of clause (d), it is hereby clarified that notwithstanding anything to the contrary contained in any judgment, decree or order of any court, tribunal, or other authority, any reference to "plant or machinery" shall be construed and shall always be deemed to have been construed as a reference to "plant and machinery".

**6. Amendment of section 20.-** In section 20 of the Principal Act,-

(i) in sub-section (1), after the word and figure "section 9", the words, brackets and figures "of this Act or under sub-section (3) or sub-section (4) of section 5 of the Integrated Goods and Services Tax Act, 2017 (Central Act No 13 of 2017)" shall be deemed to have been inserted with effect from the 1st day of April, 2025;

(ii) in sub-section (2), after the word and figure "section 9", the words, brackets and figures "of this Act or under sub-section (3) or sub-section

(4) of section 5 of the Integrated Goods and Services Tax Act, 2017 (Central Act No 13 of 2017)," shall be deemed to have been inserted with effect from the 1st day of April, 2025.

**7. Amendment of section 34.-** In section 34 of the Principal Act, in sub-section (2), for the proviso, the following proviso shall be substituted, namely:-

"Provided that no reduction in output tax liability of the supplier shall be permitted, if the-

(i) input tax credit as is attributable to such a credit note, if availed, has not been reversed by the recipient, where such recipient is a registered person; or

(ii) incidence of tax on such supply has been passed on to any other person, in other cases.".

**8. Amendment of section 38.-** In section 38 of the Principal Act,-

(i) in sub-section (1), for the words "an auto-generated statement", the words "a statement" shall be substituted;

(ii) in sub-section (2),-

(a) for the words "auto-generated statement under", the words "statement referred in" shall be substituted;

(b) in clause (a), the word "and" shall be omitted;

(c) in clause (b), after the words "by the recipient,", the word "including" shall be inserted; and

(d) after clause (b), and the entries relating thereto the following clause shall be inserted, namely:-

"(c) such other details as may be prescribed.".

**9. Amendment of section 39.-** In section 39 of the Principal Act, in sub-section (1), for the words "and within such time", the words "within such time, and subject to such conditions and restrictions" shall be substituted.

**10. Amendment of section 107.-** In section 107 of the Principal Act, in sub-section (6), for the proviso, the following proviso shall be substituted, namely:-

"Provided that in case of any order demanding penalty without involving demand of any tax, no appeal shall be filed against such order unless a sum equal to ten per cent. of the said penalty has been paid by the appellant."

**11. Amendment of section 112.-** In section 112 of Principal Act, in sub-section (8), the following proviso shall be inserted, namely:-

"Provided that in case of any order demanding penalty without involving demand of any tax, no appeal shall be filed against such order unless a sum equal to ten percent of the said penalty, in addition to the amount payable under the proviso to sub-section (6) of section 107 has been paid by the appellant.".

**12. Insertion of new section 122-B.-** After section 122A of the Principal Act, the following new section shall be inserted, namely:-

"**122-B. Penalty for failure to comply with track and trace mechanism.-** Notwithstanding anything contained in this Act, where any person referred to in clause (b) of sub-section (1) of section 148A acts in contravention of the provisions of the said section, he shall, in addition to any penalty under Chapter XV or the provisions of this Chapter, be liable to pay a penalty equal to an amount of one lakh rupees or ten per cent of the tax payable on such goods, whichever is higher.".

**13. Insertion of new section 148-A.-** After section 148 of the Principal Act, the following section shall be inserted, namely:-

"**148-A. Track and trace mechanism for certain goods.-** (1) The Government may, on the recommendations of the Council, by notification, specify,-

(a) the goods;

(b) persons or class of persons who are in possession or deal with such goods to which the provisions of this section shall apply.

(2) The Government may, in respect of the goods referred to in clause (a) of sub- section (1),-

(a) provide a system for enabling affixation of unique identification marking and for electronic storage and access of information contained therein, through such persons, as may be prescribed; and

(b) prescribe the unique identification marking for such goods, including the information to be recorded therein.

(3) The persons referred to in sub-section (1), shall,-

(a) affix on the said goods or packages thereof, a unique identification marking, containing such information and in such manner;

(b) furnish such information and details within such time and maintain such records or documents, in such form and manner;

(c) furnish details of the machinery installed in the place of business of manufacture of such goods, including the identification, capacity, duration of operation and such other details or information, within such time and in such form and manner; and

(d) pay such amount in relation to the system referred to in sub-section (2), as may be prescribed.".

**14. Amendment of Schedule III.-** In Schedule III of the Principal Act,-

(i) in paragraph 8, after clause (a), the following clause shall be inserted and shall be deemed to have been inserted with effect from the 1st day of July, 2017, namely:-

"(aa) Supply of goods warehoused in a Special Economic Zone or in a Free Trade Warehousing Zone to any person before clearance for exports or to the Domestic Tariff Area;"

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



(ii) in Explanation 2, after the words “For the purposes of”, the words, brackets and letter "clause (a) of” shall be inserted and shall be deemed to have been inserted with effect from the 1st day of July, 2017; and

(iii) after Explanation 2, the following Explanation shall be inserted and shall be deemed to have been inserted with effect from the 1st day of July, 2017, namely:-

"**Explanation 3.-** For the purposes of clause (aa) of paragraph 8, the expressions "Special Economic Zone", "Free Trade Warehousing Zone" and "Domestic Tariff Area" shall have the same meanings respectively as assigned to them in section 2 of the Special Economic Zones Act, 2005 (Central Act No 28 of 2005)."

**15. No refund of tax collected.-** No refund shall be made of all such tax which has been collected, but which would not have been so collected, had section 14 of this Amendment Act been in force at all material times.

The above translation of ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ಅಧಿನಿಯಮ, 2025 (2025 ರ ಕರ್ನಾಟಕ ಅಧಿನಿಯಮ ಸಂಖ್ಯೆ:43) be published in the official Gazette under clause (3) of Article 348 of the Constitution of India.

**THAAWARCHAND GEHLOT**
**GOVERNOR OF KARNATAKA**

By Order and in the name of
the Governor of Karnataka,

**G. SRIDHAR**
Secretary to Government
Department of Parliamentary
Affairs and Legislation

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH